ದಿನಾಂಕಃ **07-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,</u>**

1) ಹನುಮೇಗೌಡ ರವರು 1992 ಅಥವಾ 1993 ನೇ ಸಾಲಿನಲ್ಲಿ ತೀರಿಕೊಂಡಿರಬಹುದು. ಹನುಮೇಗೌಡ ರವರ ಹೆಸರಿನಲ್ಲಿ ಇದ್ದ ಆಸ್ತಿಗಳನ್ನು ದಿಃ 29-01-2013 ಎಂ ಆರ್ ನಂ. ಹೆಚ್ 81 ರಂತೆ ಪೌತಿ ವಾರಸು ಮೂಲಕ ನನ್ನ ತಂದೆ ಮತ್ತು ಅವರ ಸಹೋದರರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಮ್ಯುಟೇಷನ್ ಪ್ರತಿಯನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ 15 ಎಂದು ಗುರುತಿಸಲಾಯಿತು. ಸರ್ವೆ ನಂ. 36/2 ರಲ್ಲಿ 37 ಗುಂಟೆ ಮತ್ತು 37/2 ರಲ್ಲಿ 18 ವರೆ ಗುಂಟೆ ಆಸ್ತಿಯು ಎಸ್ ಬಿ ಅಂಜನಿಗೌಡ ರವರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಯು ಸದರಿ ಮ್ಯುಟೇಷನ್ ಪ್ರತಿಯನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ 16 ಎಂದು ಗುರುತಿಸಲಾಯಿತು.

2) ನಿಪಿ 16 ದಾಖಲೆಯಲ್ಲಿ ಇರುವ ಎಸ್ ಬಿ ಅಂಜನಿಗೌಡ ವಾದಿಯರ ತಂದೆ ಎಂದರೆ ಸರಿಯಲ್ಲ. ಸರ್ವೆ ನಂ. 37/2 ರ ಒಟ್ಟು ಆಸ್ತಿಯ ಪೂರ್ವಕ್ಕೆ ಸರ್ವೆ ನಂ.37/3 ಆಸ್ತಿ ಇದ್ದು ಮೊದಲಿಗೆ ಅಪ್ಪಾಜಿಗೌಡ ಮತ್ತು ಬೋರೇಗೌಡರವರ ಆಸ್ತಿ ಇದ್ದು, ಸದರಿ ಆಸ್ತಿಯಲ್ಲಿ ಕಾಮಾಕ್ಷಿ ರವರು ಸ್ವಾಧೀನ ಇರುತ್ತಾರೆ ಎಂದರೆ ಇರಬಹುದು. ಸದರಿ ಕಾಮಾಕ್ಷಿ ರವರು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾಮಾಕ್ಷಿ ರವರು ಸಾಲಿಗ್ರಾಮದವರು. ಸರ್ವೆ ನಂ.37/2 ರ ಆಸ್ತಿಯ ಉತ್ತರ ದಿಕ್ಕಿಗೆ 37/1 ಆಸ್ತಿ ಬರುತ್ತದೆ ಎಂದರೆ ಸರಿ. ಸರ್ವೆ ನಂ. 37/2 ರ ಉತ್ತರ ಭಾಗಕ್ಕೆ ಸರ್ವೆ ನಂ.38/9 ಜಲೇಂದ್ರ ರವರ ಆಸ್ತಿ ಇದೆ ಎಂದರೆ ಇರಬಹುದು. ಸದರಿ ಜಲೇಂದ್ರ ರವರು ಸದರಿ ಆಸ್ತಿಯನ್ನು ಪೂಜಾರಿ ಬಸವಲಿಂಗ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು. ನಾನು ಜಲೇಂದ್ರ ರವರ ವಿರುದ್ದವೂ ಸಹ ದಾವೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಜಲೇಂದ್ರರವರು ಆಸ್ತಿಯನ್ನು ಒತ್ತುವರಿ ಮಾಡಿರುವುದರಿಂದ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

3) ಸರ್ವೆ ನಂ.37/2 ಮತ್ತು 36/2 ರ ಆಸ್ತಿಯನ್ನು ನಾನು ಭೂಮಾಪಕರಾದ ಗಿರೀಶ್ ರವರ ಮೂಲಕ ಅಳತೆ ಮಾಡಿಸಿರುತ್ತೇನೆ ಎಂದರೆ ಸರಿ. ವಿಭಾಗ ಪತ್ರ ಮಾಡುವ ಕಾಲಕ್ಕೆ ನಾನು ಸದರಿ ಆಸ್ತಿಗಳನ್ನು ಭೂಮಾಪಕರಾದ ಗಿರೀಶ್ ರವರ ಮೂಲಕ ಅಳತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಭೂಮಾಪಕರಾದ ಗಿರೀಶ್ ರವರ ಮೂಲಕ ಸರ್ವೆ ಮಾಡಿ ನೀಡಿದ ಸರ್ವೆ ನಕ್ಷೆ ಮತ್ತು ವರದಿ ಮೇಲೆ ಜಲೇಂದ್ರ ರವರು ಭೂ ದಾಖಲೆಗಳ ನಿರ್ದೇಶಕರ ಸಮಕ್ಷಮ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸರ್ವೆ ಮಾಡುವ ಕಾಲಕ್ಕೆ ಯಾವುದೇ ಒತ್ತುವರಿ ಆಗಿಲ್ಲ ಎಂದು ವರದಿ ನೀಡಿದ್ದರು ಎಂದರೆ ಸರಿಯಲ್ಲ. ಭೂ ದಾಖಲೆಗಳ ನಿರ್ದೇಶಕರು ಯಾವುದೇ ಒತ್ತುವರಿ ಆಗಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

4) ನಾನು ಹಾಜರುಪಡಿಸಿರುವ ದಾಖಲೆಗಳಿಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಚೆಕ್ಕುಬಂದಿಯಲ್ಲಿ ತೋರಿಸಿರುವ ಆಸ್ತಿಯು ಸರ್ವೆ ನಂ.37/2 ರ ಪೂರ್ವಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಎಸ್ ಬಿ ಅಂಜನಿಗೌಡ ರವರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ತದನಂತರ ವಾದಿಯು ತನ್ನ ತಂದೆ ಮತ್ತು ಇತರೆಯರ ವಿರುದ್ಧ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ದಾವಾ ಆಸ್ತಿ ವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಆದ ನಂತರ ವಾದಿಯು ದಾವಾ ಸ್ವತ್ತಿನಲ್ಲಿ ನಿರಂತರವಾಗಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ.

5) ನಿಪಿ 13 ವಿಭಾಗ ಪತ್ರ ಆಗುವ ಕಾಲಕ್ಕೆ ಸರ್ವೆ ನಂ.36/2 ರಲ್ಲಿ ಎರಡು ಎಕರೆ 16 ಗುಂಟೆ ಮತ್ತು 37/2 ರಲ್ಲಿ ಒಂದು ಎಕರೆ 37 ಗುಂಟೆ ಆಸ್ತಿಗಳು ಕ್ರಮವಾಗಿ 4 ರಿಂದ 8 ಪೋಡುಗಳಾಗಿರುತ್ತವೆ ಎಂದರೆ ಸರಿ. ನಾನು ನಿರ್ಮಿಸಿರುವ ವಾಸದ ಮನೆ ಪೋಡು ಆದ ನಂತರ 37/2 ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.36/2 ಆಸ್ತಿಯ ಪೂರ್ವಕ್ಕೆ ನಮಗೆ ಸೇರಿದ 36/4 ಆಸ್ತಿ, ಪಶ್ಚಿಮಕ್ಕೆ ಶೈಲಜಾ ರವರ ಜಮೀನು, ಉತ್ತರಕ್ಕೆ 37/2 ಆಸ್ತಿ ದಕ್ಷಿಣಕ್ಕೆ ರಸ್ತೆ ಮತ್ತು ಓಣಿ ಇರುತ್ತದೆ.

6) 37/2 ರ ಆಸ್ತಿಯ ಪೂರ್ವಕ್ಕೆ ಕೃಷ್ಣೇಗೌಡರವರ ಜಮೀನು, ಪಶ್ಚಿಮಕ್ಕೆ ಕಾಳೇಗೌಡರಿಗೆ ಸೇರಿದ ಜಮೀನು, ಉತ್ತರಕ್ಕೆ ಜಲೇಂದ್ರ ರವರ ಜಮೀನು ಮತ್ತು ದಕ್ಷಿಣಕ್ಕೆ 36/2 ರ ಅಸ್ತಿ ಇರುತ್ತದೆ. 37/2 ರ ಪೂರ್ವಕ್ಕೆ ಕೃಷ್ಣೇಗೌಡ ಎಂದರೆ ನನ್ನ ತಂದೆಯ ಸಹೋದರ. ಸದರಿಯವರು ಸ್ವಾಧೀನ ಇರುವ ಆಸ್ತಿಯ ಸರ್ವೆ ನಂ.37/5. ಸರ್ವೆ ನಂ.36/4 ಆಸ್ತಿಯು ನನ್ನ ತಂದೆಗೆ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ಆಸ್ತಿಯು 2013 ನೇ ಸಾಲಿನಲ್ಲಿ ಆಗಿರು ವಿಭಾಗದ ಪತ್ರದ ಮೂಲಕ ಬಂದಿರುತ್ತದೆ. ಸರ್ವೆ ನಂ.37/2 ಆಸ್ತಿಯು ಸಹ 2013 ರಲ್ಲಿ ಆಗಿರುವ ವಿಭಾಗದ ಪತ್ರದ ಮೂಲಕ ಬಂದಿರುತ್ತದೆ. ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆಗೆ ಒಂದು ಎಕರೆ ಎರಡೂವರೆ ಗುಂಟೆ ಆಸ್ತಿ ಬಂದಿರುತ್ತದೆ. ಸರ್ವೆ ನಂ.37/2 ರಲ್ಲಿ 22 ವರೆ ಗುಂಟೆ, ಸರ್ವೆ ನಂ.36/2 ರಲ್ಲಿ 24 ಗುಂಟೆ ನನ್ನ ತಂದೆಗೆ ಬಂದಿರುತ್ತದೆ. ಸರ್ವೆ ನಂ.36/2 ಮತ್ತು 36/4 ಆಸ್ತಿಯಲ್ಲಿ ಮನೆ ಇರುತ್ತದೆ. ಸರ್ವೆ ನಂ.37/2 ರಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ.

7) ನಾನು ಭೂಮಾಪಕರಾದ ಗಿರೀಶ್ ರವರ ಜೊತೆ ಷಾಮೀಲಾಗಿ ವಾದಿಯರಿಗೆ ಸೇರಿದ ಆಸ್ತಿಯನ್ನು ಸೇರಿಸಿ ನಕ್ಷೆ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿಯನ್ನು ಅದಲು ಬದಲು ಮಾಡಲು ನಾನು ಮತ್ತು ಭೂ ಮಾಪಕರಾದ ಗಿರೀಶ್ ರವರು ಪ್ರಯತ್ನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ತೋರಿಸಿರುವ ಚೆಕ್ಕುಬಂದಿಯಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಆಸ್ತಿಯಲ್ಲಿ ಕೊಟ್ಟಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.36/2 ಆಸ್ತಿಯ ಒಟ್ಟು ವಿಸ್ತೀರ್ಣದ ಪಶ್ಚಿಮ ಭಾಗಕ್ಕೆ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ, ದಕ್ಷಿಣ ಭಾಗಕ್ಕೆ ಇರುತ್ತದೆ. ಸರ್ವೆ ನಂ.37/2 ರಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ಸರ್ವೆ ನಂ.36/2 ರಲ್ಲಿ ಮನೆ ನಿರ್ಮಿಸಿರುತ್ತೇನೆ ಎಂದರೆ 36/2 ಮತ್ತು 34 ರ ಮಧ್ಯೆ ಭಾಗದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

8) ನನ್ನ ತಂದೆ ಹೆಸರು ಮತ್ತು ವಾದಿ ತಂದೆ ಹೆಸರು ಒಂದೇ ಆಗಿರುವುದರಿಂದ ಸದರಿ ಹೆಸರುಗಳನ್ನು ದುರುಪಯೋಗಪಡಿಸಿಕೊಂಡು ದಿಃ 03-12-2013 ರಂದು ದಾನ ಪತ್ರ

ವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾನ ಪತ್ರ ಮತ್ತು ವಿಭಾಗ ಪತ್ರವನ್ನು ಗಿರೀಶ್ ರವರ ಜೊತೆ ಸೇರಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 16 ಮ್ಯುಟೇಷನ್ ನಲ್ಲಿ ನಮೂದಿಸಿರುವ ಆಸ್ತಿ ವಿಸ್ತೀರ್ಣ ವಾದಿಯ ತಂದೆಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ವಾದಿಯ ಸ್ವಾಧೀನಕ್ಕೆ ಅಡಚಣೆ ಉಂಟು ಮಾಡಿದ್ದರಿಂದ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾನ ಪತ್ರದಲ್ಲಿ ಎಸ್ ಬಿ ಅಂಜನಿಗೌಡ ಬಿನ್ ಲೇಟ್ ಬೋರೇಗೌಡ ಎಂದು ನಮೂದಿಸಿರುತ್ತದೆ ಎಂದರೆ ಸರಿ. ಹಕ್ಕು ಬಿಡುಗಡೆ ಪತ್ರದಲ್ಲಿ ನನ್ನ ತಂದೆ ಹೆಸರು ಅಂಜನಿಗೌಡ ಲೇಟ್ ಹೆಚ್ ಎಸ್ ಹನುಮೇಗೌಡ ಃಉಃ ತಮ್ಮಯ್ಯ ಎಂದು ನಮೂದಿತ್ತು ಎಂದರೆ ಸರಿ. ನಿಪಿ 14 ಪತ್ರದಲ್ಲಿ ನಮೂದು ಮಾಡಿರುವ ನನ್ನ ತಂದೆ ಹೆಸರು ಸರಿ ಇರುತ್ತದೆ. ನಾನು ದಾನ ಪತ್ರ ಮಾಡಿಕೊಳ್ಳುವ ಕಾಲಕ್ಕೆ ನನ್ನ ತಂದೆ ಹೆಸರಿನ್ನು ಎಸ್ ಬಿ ಅಂಜನಿಗೌಡ ಎಂದು ತಪ್ಪಾಗಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ